ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಗೃಹ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ     ದಿನಾಂಕ : DATE : 09/03/2020

# ಆರೋಗ್ಯ ಭಾಗ್ಯ ವಂತಿಕೆ ಹೆಚ್ಚಳ

**ಬೆಂಗಳೂರು:** ಪೊಲೀಸ್ ಸಿಬ್ಬಂದಿಗೆ ಕಲ್ಪಿಸಿರುವ ಆರೋಗ್ಯ ಭಾಗ್ಯ ಯೋಜನೆಯ ವಂತಿಕೆ ಹೆಚ್ಚಳ ಮಾಡಲಾಗಿದ್ದು, ಏ.1ರಿಂದ ಜಾರಿಗೆ ಬರಲಿದೆ.

» **ಗೆಜೆಟೆಡ್‌ಗೆ 350, ನಾನ್ ಗಜೆಟೆಡ್‌ಗೆ 300 ರೂ.**

» **20ರೊಳಗೆ ದಾಖಲೆ ಸಲ್ಲಿಸಲು ಸೂಚನೆ**

ಪಾಲಕರಿಗೆ ಆರೋಗ್ಯ ಭಾಗ್ಯ ಯೋಜನೆ ಸೌಲಭ್ಯ ಪಡೆಯಲು ಇಚ್ಛಿಸುವ ಪೊಲೀಸ್ ಗೆಜೆಟೆಡ್ ಅಧಿಕಾರಿಗಳು ಮಾಸಿಕ ವಂತಿಕೆ 350 ರೂ. ಹಾಗೂ ನಾನ್ ಗೆಜೆಟೆಡ್ ಅಧಿಕಾರಿಗಳು 300 ರೂ. ಅನ್ನು ಪಾವತಿಸಬೇಕು. ಸೌಲಭ್ಯ ಪಡೆಯಲು ಇಚ್ಛಿಸದ ಪೊಲೀಸ್ ಗಜೆಟೆಡ್ ಅಧಿಕಾರಿಗಳು 250 ರೂ., ನಾನ್ ಗಜೆಟೆಡ್ ಅಧಿಕಾರಿಗಳು 200 ರೂ. ಪಾವತಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ವೇತನದಲ್ಲಿ ಮುಂದಿನ ತಿಂಗಳಿನಿಂದ ಸಿಬ್ಬಂದಿ ಇಚ್ಛೆಗೆ ಅನುಗುಣವಾಗಿ ವೇತನ್ನ ಕಟಾವು ಮಾಡಲು ನಿರ್ಧರಿಸಲಾಗಿದೆ. ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಮಾ.20ರೊಳಗೆ ಕರ್ತವ್ಯ ನಿರ್ವಹಿಸುತ್ತಿರುವ ಠಾಣೆಗಳ ಮೂಲಕ ಸಂಬಂಧಿಸಿದ ಕಚೇರಿಗೆ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಲಾಗಿದೆ.

**ದಾಖಲೆ ಸಲ್ಲಿಸಿದರೆ ಮಾತ್ರ ಅವಕಾಶ:** ಪಾಲಕರ ಹೆಸರನ್ನು ನೋಂದಣಿ ಮಾಡಿಸುವ ಸಿಬ್ಬಂದಿ ಸೂಕ್ತ ದಾಖಲೆ ಸಲ್ಲಿಸಿದ್ದಲ್ಲಿ ಮಾತ್ರ ವೇತನದಲ್ಲಿ ಮೊತ್ತ ಕಡಿತ ಮಾಡಿ, ಯೋಜನೆ ಸೌಲಭ್ಯ ಪಡೆಯಲು ಅವಕಾಶ ಮಾಡಿಕೊಡಲಾಗುತ್ತದೆ. ವರ್ಗಾವಣೆಯಾಗಿ ಬಂದ ಅಧಿಕಾರಿ ಹಾಗೂ ಸಿಬ್ಬಂದಿ ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ವಿಭಾಗದಿಂದ ಆರೋಗ್ಯ ಭಾಗ್ಯ ಯೋಜನೆಯ ಆನ್‌ಲೈನ್ ತಂತ್ರಾಂಶದಲ್ಲಿ ವರ್ಗಾವಣೆ ನೀಡಿಕೆ ಬಗ್ಗೆ ಮಾಹಿತಿ ಪರಿಶೀಲಿಸಿಕೊಳ್ಳಬೇಕು. ಈ ಬಗ್ಗೆ ಠಾಣೆಯ ಸೂಚನಾ ಫಲಕದಲ್ಲಿ ಪ್ರದರ್ಶಿಸುವಂತೆ ಸೂಚಿಸಲಾಗಿದೆ.

## ಯಾವ ದಾಖಲೆ ಸಲ್ಲಿಸಬೇಕು?



**ನಮೂನೆಯಲ್ಲಿ ವಿವರಗಳನ್ನು ಭರ್ತಿ ಮಾಡಿ ಠಾಣಾಧಿಕಾರಿಗಳ ದೃಢೀಕರಣದೊಂದಿಗೆ ಸಲ್ಲಿಸಬೇಕು. ಸಿಬ್ಬಂದಿ ವೇತನ ಚೀಟಿ ಪ್ರತಿ ಲಗತ್ತಿಸಬೇಕು. ಆದಾಯ ಪ್ರಮಾಣ ಪತ್ರ, ಪಾಲಕರಿಗೆ ಸಂಬಂಧಿಸಿದ ಸರ್ಕಾರಿ ಗುರುತಿನ ಚೀಟಿ ಸಲ್ಲಿಸಬೇಕು. ಪಾಲಕರು ಅವರೊಂದಿಗೆ ವಾಸವಾಗಿದ್ದು, ಅವರನ್ನೇ ಸಂಪೂರ್ಣ ಅವಲಂಬಿಸಿರುವುದಾಗಿ 50 ರೂ. ಛಾಪಾ ಕಾಗದದಲ್ಲಿ ಅಫಿಡವಿಟ್ ಸಲ್ಲಿಕೆ ಕಡ್ಡಾಯ.**